# ತಾಲ್ಲೂಕು ಪಂಚಾಯತ್ ಮಟ್ಟದ ಜೀವ ವೈವಿಧ್ಯ ನಿರ್ವಹಣಾ ಸಮಿತಿ

ನಡವಳಿ ಸಂಖ್ಯೆ:________________ದಿನಾಂಕ 24/02/2015

ತಾಲ್ಲೂಕು ಪಂಚಾಯತಿ: ಹೂವಿನಹಡಗಲಿ ಜಿಲ್ಲೆ: ಬಳ್ಳಾರಿ

ದಿನಾಂಕ 24-02-2015 ರಂದು ಶ್ರೀ ಐಗೋಳ ಚಿದಾನಂದ, ಅಧ್ಯಕ್ಷರು, ತಾಲ್ಲೂಕು ಪಂಚಾಯತಿ ಇವರ ಅಧ್ಯಕ್ಷತೆಯಲ್ಲಿ ಹಡಗಲಿ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಬೆಳಗ್ಗೆ 11.00 ಗಂಟೆಗೆ ಸಭೆ ಸೇರಿ ಹಾಜರಿದ್ದ ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ, ಜೈವಿಕ ವೈವಿಧ್ಯ ಅಧಿನಿಯಮ 41(1), ಹಾಗೂ ಜೈವಿಕ ವೈವಿಧ್ಯ ನಿಯಮಗಳು 2004ರ ನಿಯಮ 22 ಹಾಗೂ ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005ರ ನಿಯಮ 21ರ ಪ್ರಕಾರ 3 ವರ್ಷಗಳ ಅವಧಿಗೆ ಈ ಕೆಳಗಿನಂತೆ ಜೀವ ವೈವಿಧ್ಯತೆ ನಿರ್ವಹಣಾ ಸಮಿತಯನ್ನು ರಚಿಸಲಾಯಿತು.

## ಸಮಿತಿಯ ಸದಸ್ಯರ ವಿವರಗಳು

| ಕ್ರ. ಸಂ | ಪೂರ್ಣ ಹೆಸರು | ವಯಸ್ಸು | ಹುದ್ದೆ | ವರ್ಗ | ಸಹಿ |
|---|---|---|---|---|---|
| 1 | ಐಗೋಳ ಚಿದಾನಂದ | 45 | ಅಧ್ಯಕ್ಷರು | ಸಾಮಾನ್ಯ | [signature] |
| 2 | ಶಿಲ್ಪಾಸಿಂಗ್ ರಾಠೋಡ | 40 | ಮಹಿಳಾ ಸದಸ್ಯರು | ಪ.ಜಾತಿ | [signature] |
| 3 | ಎಸ್.ಮಂಗಳಮ್ಮ | 35 | ಮಹಿಳಾ ಸದಸ್ಯರು | ಹಿಂ.ವರ್ಗ | [signature] |
| 4 | ಹೊನ್ನಮ್ಮ ತಳವಾರ | 65 | ಮಹಿಳಾ ಸದಸ್ಯರು | ಪ.ಪಂಗಡ | [signature] |
| 5 | ಎಲ್.ಕೃಷ್ಣನಾಯ್ಕ | 35 | ಸದಸ್ಯರು | ಪ.ಜಾತಿ | |
| 6 | ಎಂ.ಜೆ.ಲಕ್ಷ್ಮೀ | 38 | ಸದಸ್ಯರು | ಹಿಂ.ವರ್ಗ | [signature] |
| 7 | ಹೆಚ್.ಎನ್..ತಿಮ್ಮಪ್ಪ | 60 | ಕಾರ್ಯದರ್ಶಿ (ಕಾ.ನಿ.ಅಧಿಕಾರಿ.ತಾ.ಪಂ.) | ಹಿಂ.ವರ್ಗ | [signature] |

**ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ಜವಾಬ್ದಾರಿಗಳು:-**

1. ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ವ್ಯಾಪ್ತಿಯಲ್ಲಿ ಬರುವಂತಹ ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಹಾಗೂ ನಿರ್ವಹಣೆ.
2. ಜೀವ ವೈವಿಧ್ಯ ನಿರ್ವಹಣಾ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಜೈವಿಕ ಸಂಪನ್ಮೂಲಗಳ ಕಾನೂನು ಬಾಹಿರ ಹಾಗೂ ಅನಿಯಮಿತ ಚಟುವಟಿಕೆಗಳನ್ನು ತಡೆಯುವುದು.
3. ಅನುಮೋದನೆ ನೀಡುವುದಕ್ಕಾಗಿ ರಾಜ್ಯ ಜೈವಿಕ ವೈವಿಧ್ಯ ಮಂಡಳ ಅಥವಾ ಪ್ರಾಧಿಕಾರವು, ತನಗೆ ಕಳುಹಿಸಿದ ಯಾವುದೇ ವಿಷಯಗಳ ಬಗ್ಗೆ ಸಲಹೆ ನೀಡುವುದು.
4. ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯು ತನ್ನ ಕೇಂದ್ರಾಡಳಿತದ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ, ವಾಣಿಜ್ಯ ಉದ್ದೇಶಗಳಿಗಾಗಿ, ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯುವುದಕ್ಕಾಗಿ ಅಥವಾ ಸಂಗ್ರಹಿಸುವುದಕ್ಕಾಗಿ ಯಾರೇ ವ್ಯಕ್ತಿಯಿಂದ ಶುಲ್ಕರೂಪವಾಗಿ ವೆಚ್ಚಗಳನ್ನು ವಿಧಿಸಬಹುದು.
5. ಜೈವಿಕ ಸಂಪನ್ಮೂಲಗಳನ್ನು ಬಳಸುವ ಸ್ಥಳೀಯ ವೈದ್ಯರು ಮತ್ತು ವೃತ್ತಿನಿರತರ ಬಗ್ಗೆ ಅಂಕಿ-ಅಂಶ ಮಾಹಿತಿಯನ್ನು ನಿರ್ವಹಿಸುವುದು.
6. ಸಮಿತಿಯು ನೀಡಲಾದ ಜೈವಿಕ ಸಂಪನ್ಮೂಲಗಳನ್ನು ಮತ್ತು ಸಾಂಪ್ರಾದಾಯಿಕ ಜ್ಞಾನವನ್ನು ಹೊಂದುವ ಅವಕಾಶದ ವಿವರಗಳ ಬಗ್ಗೆ, ವಿಧಿಸಲಾದ ಸಂಗ್ರಹಣಾ ಶುಲ್ಕದ ವಿವರಗಳ ಬಗ್ಗೆ ಪ್ರಾಪ್ತವಾದ ಯೋಜನೆಗಳ ವಿವರಗಳು ಮತ್ತು ಅವುಗಳ ಹಂಚಿಕೆಯ ವಿಧಾನದ ಬಗ್ಗೆ ಮಾಹಿತಿಯನ್ನು ನೀಡುವ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.
7. ಜೀವವೈವಿಧ್ಯ ಹಾಗೂ ಜೀವವೈವಿಧ್ಯ ಸಂಬಂಧಿತ ಸ್ಥಳೀಯ ಸಾಂಪ್ರದಾಯಿಕ ಜ್ಞಾನದ ದಾಖಲಾತಿ ಮಾಡುವ ಕೆಲಸದಲ್ಲಿ ತೊಡಗಿಕೊಳ್ಳುವುದು ಸಮಿತಿಯ ಜವಾಬ್ದಾರಿಯಾಗಿರುತ್ತದೆ.
8. ರಾಷ್ಟ್ರೀಯ ಜೀವವೈವಿರ್ಧಯ ಪ್ರಾಧಿಕಾರ ಹಾಗೂ ಕರ್ನಾಟಕ ಜೀವವೈವಿಧ್ಯ ಮಂಡಳಿಯ ನಿರ್ದೇಶನದಂತೆ ಜೀವವೈವಿಧ್ಯ ಅನುದಾನದ ಬಳಕೆ ಹಾಗೂ ನಿರ್ವಹಣೆ

ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಸಹಿ ಕಾರ್ಯನಿರ್ವಹಣಾಧಿಕಾರಿ ಸಹಿ

ನೋಡೆಲ್ ಅಧಿಕಾರಿ ಸಹಿ